ಕರ್ನಾಟಕ ಸರ್ಕಾರ
ಸಹಾಯಕ ನಿರ್ದೇಶಕರು (ಗ್ರೇಡ್-1), ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು ದಕ್ಷಿಣ ತಾಲ್ಲೂಕು ರವರ ಕಛೇರಿ,
ಎಸ್.ಕರಿಯಪ್ಪ ರಸ್ತೆ, ಕನಕಪುರ ಮುಖ್ಯರಸ್ತೆ, ಬನಶಂಕರಿ, ಬೆಂಗಳೂರು-70

ದೂರವಾಣಿ ಸಂಖ್ಯೆ:-080-26711096 ಈ ಮೇಲ್ ವಿಳಾಸ:tswobloresouth@gmail.com

ಸನಿ:ಸಕಇ:ಬೆಂ(ದ):ಕಅ:-ಸಿಆರ್:-10:2023-24 ದಿನಾಂಕ:-21-11-2023.

## "ಪ್ರಕಟಣೆ"

2023-24ನೇ ಸಾಲಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ / ವರ್ಗದ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಆನ್‌ಲೈನ್ ಮುಖೇನ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ವಿದ್ಯಾರ್ಥಿವೇತನದ ವಿವರ, ಅರ್ಹತೆ, ಅವಶ್ಯವಿರುವ ದಾಖಲಾತಿಗಳು ಮತ್ತು ಅರ್ಜಿ ಸಲ್ಲಿಸಬೇಕಾದ ವಿಧಾನದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ | ಗ್ರೂಪ್‌ಗಳು | ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮೊತ್ತ (ಡೇ ಸ್ಕಾಲರ್) | |
|---|---|---|---|
| | | ಪರಿಶಿಷ್ಟ ಜಾತಿ | ಪರಿಶಿಷ್ಟ ವರ್ಗ |
| 1 | ಗ್ರೂಪ್-1 | 7000 | 5500 |
| 2 | ಗ್ರೂಪ್-II | 6500 | 5300 |
| 3 | ಗ್ರೂಪ್-III | 3000 | 3000 |
| 4 | ಗ್ರೂಪ್-IV | 2500 | 2300 |

**ಷರತ್ತುಗಳು:-**

1. ಕೇಂದ್ರ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಲು ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ರೂ.2.50 ಲಕ್ಷಗಳಿಗೆ ನಿಗಧಿಪಡಿಸಲಾಗಿರುತ್ತದೆ.
2. ರೂ.2.50 ಲಕ್ಷಗಳಿಂದ ರೂ.10.00 ಲಕ್ಷಗಳ ವರೆಗಿನ ಆದಾಯ ಮಿತಿಯೊಳಗಿನ ಪಜಾ / ಪವರ್ಗ ವಿದ್ಯಾರ್ಥಿಗಳಿಗೆ ಸರ್ಕಾರದ ಆದೇಶ ದಿ:-30-12-2015ರನ್ವಯ ಶುಲ್ಕ ವಿನಾಯ್ತಿಗೆ ಅವಕಾಶ ಕಲ್ಪಿಸಲಾಗುತ್ತಿದೆ.
3. ಮ್ಯಾನೇಜ್‌ಮೆಂಟ್ ಕೋಟಾದಡಿ ಆಯ್ಕೆಯಾಗುವ ಪ.ಜಾ / ಪವರ್ಗದ ವಿದ್ಯಾರ್ಥಿಗಳು ಭಾರತ ಸರ್ಕಾರದ ಮಾರ್ಗಸೂಚಿಯಂತೆ ಕಾಲೇಜು ಶುಲ್ಕಗಳ ಪಾವತಿಗೆ / ವಿದ್ಯಾರ್ಥಿವೇತನ ಮಂಜೂರಾತಿಗೆ ಹಾಗೂ ನಿಲಯ ಪ್ರವೇಶಾತಿಗೆ ಅರ್ಹರಿರುವುದಿಲ್ಲ.
4. **ವಿದ್ಯಾರ್ಥಿಗಳು ಬ್ಯಾಂಕ್ ಖಾತೆಗೆ NPCI ಮೂಲಕ ಆಧಾರ್ ಜೋಡಣೆ ಕಡ್ಡಾಯವಾಗಿ ಮಾಡಿಸತಕ್ಕದ್ದು.**

**ಅರ್ಜಿ ಸಲ್ಲಿಸುವ ವಿಧಾನ** — **ಆನ್‌ಲೈನ್ ಮುಖೇನ:-https://ssp.postmatric.karnataka.gov.in 2023-24ನೇ ಸಾಲಿಗೆ ಅರ್ಜಿ ಆಹ್ವಾನ ಮಾಡಲಾಗಿರುತ್ತದೆ.**

**ಅವಶ್ಯವಿರುವ ದಾಖಲಾತಿಗಳು** — ವಿದ್ಯಾರ್ಥಿಯ ಜೊತೆಗೆ ವಿದ್ಯಾರ್ಥಿಯ ತಂದೆ & ತಾಯಿಯವರ ಆಧಾರ್ ಕಾರ್ಡ್, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು,

ಹಿಂದಿನ ಸಾಲಿನ ಅಂಕಪಟ್ಟಿ, Bonafide certificate from college, ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ KEA ಪ್ರವೇಶ ಪತ್ರ ಹಾಗೂ University / Boards Registration nos, ಮೊಬೈಲ್ ಸಂಖ್ಯೆ, ಮನೆಯ ವಿಳಾಸ ವಿವರ

ಸಹಾಯಕ ನಿರ್ದೇಶಕರು (ಗ್ರೇಡ್-1),
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು ದಕ್ಷಿಣ ತಾಲ್ಲೂಕು.

**ಪ್ರತಿಯನ್ನು:-**

1. ಮಾನ್ಯ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಇನ್‌ಫಾಂಟ್ರಿ ರಸ್ತೆ, ಬೆಂಗಳೂರು ರವರಿಗೆ ಸಲ್ಲಿಸುತ್ತಾ, **ಸದರಿ ಪ್ರಕಟಣೆಯನ್ನು ಉಚಿತವಾಗಿ ಪ್ರಚಾರ ಮಾಡಲು** ಈ ಮೂಲಕ ಕೋರಿದೆ.
2. ಮಾನ್ಯ ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ ರವರ ಅವಗಾಹನೆಗೆ ಸಲ್ಲಿಸಿದೆ.
3. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರ ನಗರ ಜಿಲ್ಲೆ ರವರಿಗೆ ಸಲ್ಲಿಸುತ್ತಾ ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಕಾಲೇಜುಗಳ ಪ್ರಾಂಶುಪಾರಿಗೆ ಈ ಬಗ್ಗೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ / ಪವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ **ತಿಳುವಳಿಕೆ ನೀಡಿ, ಆನ್‌ಲೈನ್‌ನಲ್ಲಿ** ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳಿಗೆ ವಿದ್ಯಾ ಸಂಸ್ಥೆಯಲ್ಲಿಯೇ ಅವಕಾಶ ಕಲ್ಪಿಸಿ ಹಾಗೂ **ಬ್ಯಾಂಕ್ ಖಾತೆಗೆ NPCI ಮೂಲಕ ಆಧಾರ್ ಜೋಡಣೆ ಮಾಡಿಸುವ ಬಗ್ಗೆ**, ಸೂಕ್ತ ನಿರ್ದೇಶನ ನೀಡಲು ಈ ಮೂಲಕ ಕೋರಿದೆ.
4. ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯಾಪ್ತಿಯಲ್ಲಿನ ಕಾಲೇಜುಗಳಿಗೆ ಈ ಮೇಲ್ ಮುಖೇನ ಮೇಲಿನ ಕ್ರಸಂ-4ರಲ್ಲಿ ವಿವರಿಸಿದಂತೆ ಮುಂದಿನ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯಾಪ್ತಿಯಲ್ಲಿನ ಎಲ್ಲಾ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ನಿಲಯಗಳ ವಾರ್ಡನ್ ರವರಿಗೆ ಕಳುಹಿಸುತ್ತಾ ನಿಲಯಗಳಲ್ಲಿನ ನೋಟಿಸ್ ಬೋರ್ಡ್ ನಲ್ಲಿ ಮೇಲಿನ ಪ್ರಕಟಣೆಯನ್ನು ಪ್ರದರ್ಶಿಸಲು ತಿಳಿಸಿದೆ.
6. ಕಛೇರಿ ಸೂಚನಾ ಫಲಕಕ್ಕೆ.
7. ಕಛೇರಿ ಸಿಬ್ಬಂದಿಗಳಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.